ದಿನಾಂಕಃ **25.02.2025** ಎಮ್.ವಿ.ಸಿ . ನಂ.**377/2024**

ಪಿ.ಡಬ್ಲ್ಯೂ **: 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ **ಸವಾಲು ಎದುರುದಾರ ಪರ ಶ್ರೀಮತಿ ಎಸ್ ಎಲ್ ಕೆ ವಕೀಲರು ಶ್ರೀ ಡಿ ಟಿ ಬಿ ವಕೀಲ ಪರವಾಗಿಃ**</u>

ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೆಡಕಹಾಳದ ವೆಂಕಟೇಶ್ವರ ಫ್ಯಾಕ್ಟರಿಯಲ್ಲಿ **21** ವರ್ಷಗಳಿಂದ ಕೆಲಸ ಮಾಡುತ್ತಾ ಇದ್ದೆನು. ಅಪಘಾತ ವಾದಗಲಿಂದ ನಾನು ಕೆಲಸ ಮಾಡುತ್ತಾ ಇಲ್ಲ. ಅಪಘಾತಕ್ಕಿಡಾದ ಕೆ ಎ 23 ಇ ಜಿ 8471 ನನ್ನ ಮಾಲೀಕತ್ವದ ದ್ವಿಚಕ್ರ ವಾಹನ ಆಗಿತ್ತು. ನಾನು ಕೆಲಸಕ್ಕಾಗಿ ದಿನಾಲು ಅಪಘಾತವಾದ ರಸ್ತೆಯಲ್ಲಿಯೇ ಓಡಾಡುತ್ತಾ ಇದ್ದೆನು ಎಂದರೆ ಸರಿ. ಅಪಘಾತವಾದ ದಿನ ಬೆಳಿಗ್ಗೆ 04.00 ರಿಂದ ಮಧ್ಯಾಹ್ನ 12.00 ರವರೆಗೆ ನನ್ನ ಕರ್ತವ್ಯದ ಅವಧಿ ಇತ್ತು. ಅಪಘಾತವಾದ ದಿನ ನನ್ನ ಮುಂದೆ ದ್ವಿಚಕ್ರ ವಾಹನದಲ್ಲಿ ನಮ್ಮ ಕಂಪನಿಯ ಶಿವರಾಜ್ ಹಿಡದುಬ್ಬಿ ಅವರು ಕೆಲಸ ಮುಗಿಸಿಕೊಂಡು ವಾಪಸ್ಸು ಹೋಗುತ್ತಾ ಇದ್ದರು. ನಾನು ಮತ್ತು ಶಿವರಾಜ್ ಹಿಡದುಬ್ಬಿ ಅವರಿಗೂ 20 ರಿಂದ 30 ಅಂತರದಲ್ಲಿ ಹೋಗುತ್ತಾ ಇದ್ದೆವು. ಹತ್ತರವಾಡ ಮತ್ತು ನಾಯಿಂಗ್ಲಜ ರಸ್ತೆಯು ತಿರುವುಗಳಿಂದ ಕೂಡಿದ ರಸ್ತೆ ಮತ್ತು ಏರು ರಸ್ತೆ ಇತ್ತು ಎಂದರೆ ಸರಿ. ನಾಯಿಂಗ್ಲಜ ಕಡೆಯಿಂದ ಹೋಗುವ ರಸ್ತೆ ಏರು ರಸ್ತೆ ಆದ ಕಾರಣ ವಾಹನಗಳು ವೇಗವಾಗಿ ಹೋಗಲು ಆಗುವುದಿಲ್ಲ ಎಂದರೆ ಸರಿ. ಆ ದಿನ ನೀವು ಬರುತ್ತಾ ಇದ್ದ ರಸ್ತೆ ಇಳಿಜಾರು ರಸ್ತೆ ಇತ್ತು ಎಂದರೆ ಸರಿ. ಇಳಿಜಾರು ರಸ್ತೆಯಲ್ಲಿ ಸಾಮಾನ್ಯವಾಗಿ ಎಲ್ಲಾ ವಾಹನಗಳು ವೇಗವಾಗಿ

ದಿನಾಂಕಃ **25.02.2025** ಎಮ್.ವಿ.ಸಿ . ನಂ.**377/2024**

ಪಿ.ಡಬ್ಲ್ಯೂ : 1

ಬರುತ್ತವೆ ಎಂದರೆ ಸರಿ. ಸುಮಂತ ನಾಯ್ಕ ಅವರು ಬೆಡಕಿಹಾಳದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸುಮಂತ ನಾಯ್ಕ ನನ್ನ ಪರಿಚಯಸ್ಥರು ಅಲ್ಲ. ಅಪಘಾತ ಸ್ಥಳದಲ್ಲಿ ಸುಮಂತ ನಾಯ್ಕ ಅವರು ಬಂದು ನಂತರ ಫಿರ್ಯಾದೆಯನ್ನು ನೀಡಿರುತ್ತಾರೆ. ಸುಮಂತ ನಾಯ್ಕ ಅವರು ಅಪಘಾತವನ್ನು ನೋಡಿದ್ದಾರ ಎಂದರೆ ನನಗೆ ಅಪಘಾತ ವಾದಾಗ ಅವರು ಸ್ಥಳಕ್ಕೆ ಬಂದಿದ್ದರು ಎಂದು ನುಡಿಯುತ್ತಾರೆ. ಶಿವರಾಜ್ ಹಿಡದುಬ್ಬಿ ಅವರಿಂದ ಮಾಹಿತಿಯನ್ನು ಪಡೆದು ಸುಮಂತ ನಾಯ್ಕ ಅವರು ಒಂದು ದಿನ ವಿಳಂಬವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ದಿನ ಗೂಡ್ಸ ವಾಹನದಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಗೂಡ್ಸ ವಾಹನದ ಚಾಲಕನು ವೇಗವಾಗಿ ಬಂದು ನನಗೆ ಅಪಘಾತ ಮಾಡಿ ವೇಗವಾಗಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಇಳಿಜಾರು ರಸ್ತೆಯಲ್ಲಿ ಬರುತ್ತಾ ಇದ್ದ ಕಾರಣ ನಿಯಂತ್ರಣ ತಪ್ಪಿ ಅಪಘಾತ ವಾಗಿರುತ್ತದೆ ಎಂದರೆ ನಾನು ಏರು ರಸ್ತೆಯಲ್ಲಿ ಹೋಗುತ್ತಾ ಇದ್ದೆನು ಗೂಡ್ಸ ವಾಹನದ ಚಾಲಕನು ಇಳಿಜಾರು ರಸ್ತೆಯಲ್ಲಿ ಬರುತ್ತಾ ಇದ್ದನು ಎಂದು ನುಡಿಯುತ್ತಾರೆ.

ಅಪಘಾತವು 25.01.2024 ರಂದು ಮಧ್ಯಾಹ್ನ 12.20 ರಿಂದ 12.30 ರ ಸಮಯದಲ್ಲಿ ಆಗಿರುತ್ತದೆ. ಬೆಡಿಕಹಾಳ ಫ್ಯಾಕ್ಟರಿಯಿಂದ ಅಪಘಾತ ಸ್ಥಳವು ಅಂದಾಜು 11-12 ಕಿ.ಮೀ ಅಂತರದಲ್ಲಿ ಇತ್ತು . ನನಗೆ ಡಿಕ್ಕಿ ಪಡೆಸಿದ ಟ್ರಕ್ ಸಂಖ್ಯೆ ಕೆ ಎ 22 ಬಿ 4099 ಆಗಿರುತ್ತದೆ. ನನಗೆ ಸಹಾಯ ಮಾಡುವ ಉದ್ದೇಶದಿಂದ ಶಿವರಾಜ್ ಹಿಡದುಬ್ಬಿ

ದಿನಾಂಕಃ **25.02.2025** ಎಮ್.ವಿ.ಸಿ . ನಂ.**377/2024**

ಪಿ.ಡಬ್ಲೂ : 1

ಮತ್ತು ಸುಮಂತ ನಾಯ್ಕ ಅವರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಪ್ಪಿ ನಿಂದ ಅಪಘಾತ ವಾದ ಕಾರಣ ಪೋಲಿಸರು ನನ್ನ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ದೂರು ನೀಡಲು ಹೋದಾಗ ಪೋಲಿಸರು ಪಡೆದುಕೊಳ್ಳದ ಕಾರಣ ಒಂದು ದಿನ ವಿಳಂಬವಾಗಿರುತ್ತದೆ ಎಂದು ನುಡಿಯುತ್ತಾರೆ. ದೋಷರೋಪಣಾ ಪಟ್ಟಿಯಲ್ಲಿ ನಿಮ್ಮ ನಿಲರ್ಕ್ಷ್ಯತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸುಮಂತ ನಾಯ್ಕ ಅವರು ನಿಮ್ಮ ನಿಲರ್ಕ್ಷ್ಯತನದಿಂದ ಅಪಘಾತವಾಗಿದೆ ಎಂದು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಪ್ಪಿ ನಿಂದ ಅಪಘಾತ ವಾಗಿದ್ದರು ಸಹ ಗೂಡ್ಸ ವಾಹನಕ್ಕೆ ವಿಮೆ ಇದ್ದ ಕಾರಣ ಪರಿಹಾರವನ್ನು ಪಡೆಯುವ ಸಲುವಾಗಿ ಪೋಲಿಸರ ಜೊತೆ ಶಾಮೀಲು ಆಗಿ ಸುಳ್ಳು ಕೇಸನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೂಡ್ಸ ವಾಹನದ ಚಾಲಕನ ಯಾವುದೇ ತಪ್ಪಿ ಲ್ಲ ನಿಮ್ಮ ತಪ್ಪಿ ನಿಂದ ಅಪಘಾತ ವಾಗಿರುತ್ತದೆ ಆದರೂ ಸಹ ಸುಳ್ಳು ಕೇಸು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಯನ್ನು ನೀಡಿರುತ್ತೇನೆ . ನಿಮ್ಮ ವಯಸ್ಸು 42 ಅಂದರೆ ಇಲ್ಲ 39 ಎಂದು ನುಡಿಯುತ್ತಾರೆ. ನನ್ನ ವಯಸ್ಸು 39 ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು ಈಗ ಯಾವುದೇ ಕೆಲಸವನ್ನು ಮಾಡುತ್ತಾ ಇಲ್ಲ. ನಿಮಗೆ ಅಪಘಾತವಾದಾಗ ದಿಯಾ ಆಸ್ಪತ್ರೆ ಚಿಕ್ಕೋಡಿಗೆ

ದಿನಾಂಕಃ **25.02.2025** ಎಮ್.ವಿ.ಸಿ . ನಂ.**377/2024**

ಪಿ.ಡಬ್ಲ್ಯೂ : 1

ಹೋಗಿರುತ್ತೀರಿ ಎಂದರೆ ನನಗೆ ಪ್ರಜ್ಞೆ ಇರಲಿಲ್ಲ ನನಗೆ ಪ್ರಜ್ಞೆ ಬಂದಾಗ ನಾನು ಚಿಕ್ಕೋಡಿ ಆಸ್ಪತ್ರೆಯಲ್ಲಿದ್ದೆನು ಎಂದು ನುಡಿಯುತ್ತಾರೆ. ನನಗೆ ಕೈಗೆ ಮತ್ತು ಕಾಲಿಗೆ ಅಪಘಾತ ದಲ್ಲಿ ಪೆಟ್ಟಾಗಿರುತ್ತದೆ. ನಾನು ಚಿಕ್ಕೋಡಿ ಆಸ್ಪತ್ರೆಗೆ ಅಪಘಾತವಾದ ದಿನ ದಾಖಲಾಗಿ 5-6 ದಿನ ಇದ್ದೆನು.

ನಾನು ವೆಂಕಟೇಶ್ವರ ಬೆಡಿಕೆಹಾಳ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಾ ಇದ್ದೆನು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನ್ನ ವೇತನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಹೈನುಗಾರಿಕೆಯಿಂದ ತಿಂಗಳಿಗೆ 15 ಸಾವಿರ ಆದಾಯ ಗಳಿಸುತ್ತಾ ಇದ್ದೆ ಎಂದು ತೋರಿಸಲು ದಾಖಲೆ ಇದೆ ಸದರಿ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ನಾನು ಆಸ್ಪತ್ರೆಗೆ 3 ಲಕ್ಷ ಖರ್ಚು ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಮುಂದಿನ ವೈದ್ಯಕೀಯ ವೆಚ್ಚಕ್ಕಾಗಿ 70 ಸಾವಿರ ಬೇಕಾಗುತ್ತದೆ ಎಂದು ಅರ್ಜಿಯಲ್ಲಿ ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಹಾರ ಮತ್ತು ಹೋಗಿ ಬರುವ ಖರ್ಚು 60 ಸಾವಿರ ಎಂದು ಸುಳ್ಳಾಗಿ ನಮೂದಿಸಿದ್ದೇನೆ ಎಂದರೆ

ದಿನಾಂಕಃ **25.02.2025** ಎಮ್.ವಿ.ಸಿ . ನಂ.**377/2024**

ಪಿ.ಡಬ್ಲ್ಯೂ : 1

ಸರಿಯಲ್ಲ. ನಾನು ಈಗಲೂ ನೌಕರಿ ಮಾಡುತ್ತಾ ಇದ್ದು ಪರಿಹಾರದ ಸಲುವಾಗಿ ನಾನು ಕೆಲಸ ಮಾಡುತ್ತಾ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ ಸರಿ ಇದೆ.**

**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,

ಬೆಳಗಾವಿ.